



# ಕುತೂಹಲ ಪ್ರವೃತ್ತಿ

ಮನುಷ್ಯನನ್ನು ಇತರ ಜೀವಿಗಳಿಂದ ಪ್ರತ್ಯೇಕಿಸುವ ಹಲವು ಸಂಗತಿಗಳಲ್ಲಿ ಅವನಲ್ಲಿರುವ ಕುತೂಹಲವೆಂಬ ಗುಣ ಮುಖ್ಯವಾದುದು. ಅದೊಂದು ಸಹಜ ಪ್ರವೃತ್ತಿ; ಹುಟ್ಟಿನಿಂದಲೇ ಬರುವಂಥದ್ದು. ಈ ಪ್ರಪಂಚಕ್ಕೆ ಬಂದಿರುವ ಮಗು ಕೂಡಾ ತನ್ನ ಕುತೂಹಲ ಪ್ರವೃತ್ತಿಯನ್ನು ತನ್ನದೇ ಆದ ಶಾರೀರಿಕ ಭಾಷೆಯಲ್ಲಿ ಪ್ರಕಟಿಸುವುದನ್ನು ಗಮನಿಸಬಹುದು. ಅದು ತಾನು ಕಾಣುವ, ಕೇಳುವ, ಅನುಭವಿಸುವ ವಸ್ತು, ಸಂಗತಿಗಳ ಬಗ್ಗೆ ತನಗಾಗುವ ಸಂತೋಷ, ಭಯ, ವಿಸ್ಮಯ ಇತ್ಯಾದಿಗಳನ್ನು ವ್ಯಕ್ತಪಡಿಸುವುದರ ಜೊತೆಗೆ, ಅವುಗಳ ಕುರಿತಾದ ಕುತೂಹಲವನ್ನೂ ಕಣ್ಣುಗಳ ಮೂಲಕವೋ, ಇತರ ಶಾರೀರಿಕ ಚಲನೆಗಳ ಮೂಲಕವೋ, ವಿಶಿಷ್ಟ ರೀತಿಯಲ್ಲಿ ಧ್ವನಿಯನ್ನು ಹೊರಡಿಸುವುದರ ಮೂಲಕವೋ ವ್ಯಕ್ತಪಡಿಸುತ್ತದೆ. ಹೀಗೆ ಬದುಕಿನ ಪ್ರಾರಂಭದಲ್ಲೇ ಮನುಷ್ಯನಲ್ಲಿ ಸೂಕ್ಷ್ಮವಾಗಿ ಕಾಣಿಸಿಕೊಳ್ಳುವ ಕುತೂಹಲ ಪ್ರವೃತ್ತಿ, ಕ್ರಮೇಣ ವಿಸ್ತರಿಸುತ್ತಾ, ಜ್ಞಾನದ ಹಸಿವನ್ನು ಹುಟ್ಟುಹಾಕುತ್ತದೆ. ಮನುಷ್ಯನ ವ್ಯಕ್ತಿತ್ವದ ವಿಕಸನಕ್ಕೆ ಕಾರಣವಾಗುವ ಕುತೂಹಲವೆಂಬ ಪ್ರವೃತ್ತಿ ಮನುಷ್ಯನ ಪಾಲಿಗೆ ಪ್ರಕೃತಿ ಕೊಟ್ಟಿರುವ ಅತ್ಯಂತ ಸರಳವೂ, ಪ್ರಾಥಮಿಕವೂ ಆಗಿರುವ ಒಂದು ಭಾವ ವಿಶೇಷ. ಆದ್ದರಿಂದಲೇ ಬರ್ಕ್ ಎಂಬ ಚಿಂತಕ **'The first and the simplest emotion which we discover in the human mind is curiosity'** ಎಂದಿರುವುದು.

ಒಟ್ಟಿನಲ್ಲಿ ಕುತೂಹಲವೆಂಬುದು ಮನುಷ್ಯನ ಪ್ರಗತಿಯ ಮೊದಲ ಮೆಟ್ಟಿಲು, ಆತನ ಬದುಕಿನ ವಿಕಾಸರೇಖೆಯ ಮೂಲ ಬಿಂದು. ಬೆರಗಿನಿಂದ ಹುಟ್ಟುವ ಕುತೂಹಲ ಪ್ರಶ್ನೆಗಳಾಗಿ, ಅನ್ವೇಷಕ ಪ್ರವೃತ್ತಿಯಾಗಿ, ಅಂತಿಮದಲ್ಲಿ ವಸ್ತುಸಂಗತಿಗಳ ಕುರಿತಾದ ಅರಿವಾಗಿ ಪರ್ಯವಸಾನಗೊಳ್ಳುತ್ತದೆ. ಆದ್ದರಿಂದಲೇ ಪ್ರಕೃತಿ ನಮ್ಮಲ್ಲಿನ ಕುತೂಹಲ ಪ್ರವೃತ್ತಿಯನ್ನು ಪ್ರಚೋದಿಸುವ ಅಸಂಖ್ಯಾತ ಸಂದರ್ಭಗಳನ್ನು ನಮ್ಮ ಮುಂದೆ ತೆರೆದಿಡುತ್ತದೆ. ಶಬ್ದ, ಸ್ಪರ್ಶ, ರೂಪ, ರಸ, ಗಂಧ – ಹೀಗೆ ನಮ್ಮ ಇಂದ್ರಿಯಗಳ ಮೂಲಕ ನಮ್ಮ ಮನಸ್ಸಿಗೆ ನುಗ್ಗಿ ಬರುವ ಸಂವೇದನೆಗಳು ತಮ್ಮೊಂದಿಗೆ ಕುತೂಹಲವನ್ನು ಹೊತ್ತು ತರುತ್ತವೆ. ಹಸಿರು ಬಳ್ಳಿಯಲ್ಲಿ ಕಾಣಿಸಿಕೊಂಡು ಘಮಘಮಿಸುವ ಅಚ್ಚಬಿಳಿಯ ಮಲ್ಲಿಗೆ ಹೂವು, ತೆಂಗಿನ ಮರದ ತುತ್ತತುದಿಯಲ್ಲಿದ್ದರೂ, ಸಿಹಿಯಾದ ನೀರನ್ನು ಹೊಂದಿರುವ ತೆಂಗಿನ ಕಾಯಿ, ನೀಲಾಗಸದಲ್ಲಿ ಕಾಣಿಸಿಕೊಳ್ಳುವ ಸೂರ್ಯ, ಚಂದ್ರ, ಗ್ರಹ, ನಕ್ಷತ್ರಗಳು – ಇಂಥ ಲೆಕ್ಕವಿಲ್ಲದಷ್ಟು ಪ್ರಾಕೃತಿಕ ವಿದ್ಯಮಾನಗಳು ನಮ್ಮಲ್ಲಿ ವಿಸ್ಮಯವನ್ನು ಹುಟ್ಟುಹಾಕುತ್ತವೆ; ಕುತೂಹಲವನ್ನು ಉದ್ದೀಪಿಸಿರುತ್ತದೆ. ಸಸ್ಯಲೋಕದಲ್ಲಿ ಪ್ರಾಣಿ ಪಕ್ಷಿ ಪ್ರಪಂಚದಲ್ಲಿ, ಮಾನವ ಜಗತ್ತಿನಲ್ಲಿ ನಮಗೆ ಎದುರಾಗುವ ವೈವಿಧ್ಯ, ವೈಶಿಷ್ಟ್ಯ, ವೈರುಧ್ಯಗಳೂ ನಮ್ಮ ಕುತೂಹಲಕ್ಕೆ ಕಾರಣವಾಗುತ್ತದೆ; ಆ ಕುತೂಹಲವೇ ಈ ಎಲ್ಲ ವೈವಿಧ್ಯ, ವೈಶಿಷ್ಟ್ಯ, ವೈರುಧ್ಯಗಳಿಗೆ ಕಾರಣವೇನಿರಬಹುದೆಂಬ ಪ್ರಶ್ನೆಯನ್ನು ಹುಟ್ಟುಹಾಕಿ, ನಮ್ಮಲ್ಲಿ ಅನ್ವೇಷಣಾ ಮನೋಭಾವವನ್ನು ಪ್ರೇರೇಪಿಸುತ್ತದೆ.

ಕುತೂಹಲವೆಂಬುದು ತನ್ನೊಂದಿಗೆ 'ಏನು?', 'ಏಕೋ', 'ಹೇಗೋ?' – ಇತ್ಯಾದಿ ಪ್ರಶ್ನೆಗಳ ಗೊಂಚಲನ್ನೇ ಹೊತ್ತು ತರುವುದರಿಂದ ಮನುಷ್ಯನ ಮೆದುಳು ಕ್ರಿಯಾಶೀಲವಾಗುತ್ತದೆ. ವಿಜ್ಞಾನ, ತತ್ವಜ್ಞಾನಗಳೆರಡೂ ಕುತೂಹಲದ ಶಿಶುಗಳೇ. ಕುತೂಹಲದ ಪ್ರೇರಣೆಯಿಂದಾಗಿ ಗೆಲಿಲಿಯೋ, ನ್ಯೂಟನ್ ಮುಂತಾದ ವಿಜ್ಞಾನಿಗಳು ಹುಟ್ಟಿಕೊಳ್ಳುತ್ತಾರೆ; ಯಾಜ್ಞವಲ್ಕ್ಯ, ಕಣಾದರಂಥ ತತ್ವಜ್ಞಾನಿಗಳೂ, ಅನ್ವೇಷಕರೂ ರೂಪುಗೊಳ್ಳುತ್ತಾರೆ. ಕುತೂಹಲ ಕೆರಳಿಸಿದ ಪ್ರಶ್ನೆಗಳಿಗೆ ಪ್ರಾಯೋಗಿಕವಾಗಿ, ಸತಾರ್ಕಿಕವಾಗಿ ಉತ್ತರ ಹುಡುಕಲು ಪ್ರಯತ್ನಿಸಿದಾಗ ವಿಜ್ಞಾನಿಯಾಗುತ್ತಾನೆ; ಊಹೆ, ಕಲ್ಪನೆ, ಚಿಂತನೆಗಳ ಮೂಲಕ ಉತ್ತರ ಕಂಡುಹಿಡಿಯಲು ಪ್ರಯತ್ನಿಸಿದಾತ ತತ್ವಜ್ಞಾನಿಯಾಗುತ್ತಾನೆ. 'ಕೇನ' ಎಂದರೆ 'ಯಾರಿಂದ' ಎಂಬ ಪದದಿಂದ ಪ್ರಾರಂಭವಾಗುವ ಕೇನೋಪನಿಷತ್ತಿನಲ್ಲಿ ಉಪನಿಷತ್ತಿನ ಋಷಿ ಸೃಷ್ಟಿಯ ರಹಸ್ಯದ ಬಗೆಗಿನ ಪ್ರಶ್ನೆಗಳಿಂದಲೇ ತನ್ನ ಚಿಂತನೆಯನ್ನು ವಿಸ್ತರಿಸುತ್ತಾ ಹೋಗುತ್ತಾನೆ. 'ಮನಸ್ಸನ್ನು ಪ್ರೇರೇಪಿಸುವವರಾರು? ಪ್ರಾಣಕ್ಕೆ ಪ್ರಥಮ ಪ್ರವೃತ್ತಿಯನ್ನೀಯುವವರು ಯಾರು?'– ಇಂಥ ಪ್ರಶ್ನೆಗಳಿಂದ ಆರಂಭವಾಗುವ ಋಷಿ ಚಿಂತನೆ ಅಂತಿಮವಾಗಿ ಇಡೀ ವಿಶ್ವದ ಹಿಂದಿರುವ ಚಾಲಕಶಕ್ತಿಯಾದ ಬ್ರಹ್ಮನ ಕಲ್ಪನೆಯನ್ನು ವಿರಮಿಸುತ್ತದೆ.

ಕುತೂಹಲ ಪ್ರವೃತ್ತಿಗೆ ದೃಷ್ಟಿ ಹಾಗೂ ಸಮಷ್ಟಿ ಹಿತ ಸಾಧಿಸುವಂಥ ಉದಾತ್ತ ಮುಖವಿರುವಂತೆ, ಇನ್ನೊಬ್ಬರ ಅತ್ಯಂತ ಖಾಸಗಿ ಸಂಗತಿಗಳನ್ನು ತಿಳಿದುಕೊಳ್ಳಬೇಕೆನ್ನುವ ಅಪಾಯಕಾರಿಯಾದ ಅನುದಾತ್ತ ಮುಖವೂ ಇದೆ. ಎಷ್ಟೋ ಮಂದಿ ಇಂಥ ತಾಮಸ ಕುತೂಹಲದಿಂದಾಗಿ ಇತರರಿಗೂ ಕಿರಿಕಿರಿಯುಂಟು ಮಾಡಿ ತಾವೂ ಸಣ್ಣವರಾಗುತ್ತಾರೆ. ಸ್ವಂತಕ್ಕೆ ಹಾಗೂ ಸಮುದಾಯದ ಒಳಿತಿಗೆ ಅವಕಾಶ ಮಾಡಿಕೊಡುವ ಕುತೂಹಲವನ್ನು ಕಾಪಾಡಿಕೊಂಡು, ತಾಮಸ ಕುತೂಹಲದಿಂದ ದೂರವಿರುವ ಎಚ್ಚರ ಬಹಳ ಮುಖ್ಯ.

■ ವೈನತೇಯ





## ಮಾತೇ ಮುತ್ತು

ಒಂದು ಮುತ್ತು ಸಾಲ ಕೊಡ್ತೀರಾ..? ಖಂಡಿತವಾಗ್ಲೂ ವಾಪಸ್ ಕೊಡ್ತೀನಿ!

ಮದುವೆ ಅಂದರೆ ಒಂದು ವರ್ಕ್‌ಶಾಪ್. ಗಂಡ ವರ್ಕ್ ಮಾಡ್ತಾನೆ; ಹೆಂಡತಿ ಶಾಪಿಂಗ್ ಮಾಡ್ತಾಳೆ!

ಹುಡುಗರು ಕಂಡದ್ದನ್ನು ಪ್ರೀತಿಸುತ್ತಾರೆ, ಹುಡುಗಿಯರು ಕೇಳಿದ್ದನ್ನು ಪ್ರೀತಿಸುತ್ತಾರೆ. ಅದಕ್ಕೇ ಹುಡುಗಿಯರು ಮೇಕಪ್ ಮಾಡುತ್ತಾರೆ ಮತ್ತು ಹುಡುಗರು ಸುಳ್ಳು ಹೇಳುತ್ತಾರೆ.



ಐದೇ ನಿಮಿಷದಲ್ಲಿ ಹೊರಟುಬಿಡ್ತೀನಿ ಇರಿ ಎಂದು ಹೆಂಡತಿ ಹೇಳಿದರೆ– ಐದೇ ನಿಮಿಷದಲ್ಲಿ ಮನೆಗೆ ಬಂದು ಬಿಡ್ತೀನಿ ಎಂದು ಗಂಡ ಹೇಳಿದರೆ– ನಂಬಬೇಡಿ!

ನಗು ಅತ್ಯುತ್ತಮ ಔಷಧಿ. ಆದರೆ ನೀವು ಕಾರಣವೇ ಇಲ್ಲದೆ ನಗುತ್ತಿದ್ದರೆ ನಿಮಗೆ ಔಷಧಿ ಬೇಕಾಗುತ್ತದೆ!



ಒಳ್ಳೆಯ ಹುಡುಗಿಯರು ಜಗತ್ತಿನ ಎಲ್ಲ ಮೂಲೆಗಳಲ್ಲೂ ಸಿಗುತ್ತಾರೆ. ದುರದೃಷ್ಟದ ಸಂಗತಿಯೆಂದರೆ ಜಗತ್ತು ದುಂಡಗಿದೆ!

ದೇವರು ಎಲ್ಲರನ್ನೂ ವಿಭಿನ್ನವಾಗಿ ಸೃಷ್ಟಿಸಿದ. ಆದರೆ ಕೊನೆಗೆ ಚೀನಾಕ್ಕೆ ಹೋದಾಗ ಅವನಿಗೆ ಆಯಾಸವಾಗಿತ್ತು!

ಶಾಲೆಯಲ್ಲಿ ನಿಮಗೆ ಮೊದಲು ಪಾಠ ಮಾಡುತ್ತಾರೆ, ಆ ಬಳಿಕ ಪರೀಕ್ಷೆ ನಡೆಸುತ್ತಾರೆ. ಜೀವನದಲ್ಲಿ ಮೊದಲು ನಿಮ್ಮ ಪರೀಕ್ಷೆ ನಡೆಯುತ್ತದೆ, ಬಳಿಕ ನೀವು ಪಾಠ ಕಲಿಯುತ್ತೀರಿ!

ಮೊನ್ನೆ ಚಿಪ್ಸ್ ಪ್ಯಾಕೆಟ್ ಕೊಳ್ಳುವವರೆಗೆ, ಗಾಳಿ ಉಚಿತ ಎಂದೇ ನಾನು ತಿಳಿದುಕೊಂಡಿದ್ದೆ!



ಎಲ್ಲರೂ ಸ್ವರ್ಗಕ್ಕೆ ಹೋಗಲು ಬಯಸುತ್ತಾರೆ, ಆದರೆ ಯಾರೂ ಸಾಯಲು ಬಯಸುವುದಿಲ್ಲ!

